ಶ್ರೀಮದ್ ಶಂಕರಾಚಾರ್ಯ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ ಸೋಂದಾ

# ಸ್ವರ್ಣವಲ್ಲೀ ಕೃಷಿ ಪ್ರತಿಷ್ಠಾನ (ರಿ.)



ತೋಟಗಾರ್ಸ್ ಸೇಲ್ ಸೊಸೈಟಿ ಲಿ., ಶಿರಸಿ ಪ್ರಾಯೋಜಿತ

## ಅಲ್ಪ ವೆಚ್ಚದ ಸೋಲಾರ ಡ್ರೈಯರ್

# ಮಾಹಿತಿ ಕೈಪಿಡಿ



ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು
ಉತ್ಥಾನ ದ್ವಾದಶಿಯಂದು (18-11-2010) ಶ್ರೀಮಠದಲ್ಲಿ
"ಸೂರ್ಯ" ಡ್ರೈಯರ್ ಲೋಕಾರ್ಪಣೆ ಮಾಡುತ್ತಿರುವುದು

ಪ್ರಕಟನೆ : **ಸ್ವರ್ಣವಲ್ಲೀ ಕೃಷಿ ಪ್ರತಿಷ್ಠಾನ**
18–11–2010, ಉತ್ಥಾನ ದ್ವಾದಶಿ

ತಂತ್ರಜ್ಞಾನ ರೈತನಿಗೆ ನೇರ ವರ್ಗಾವಣೆ–ಆ ಕುರಿತು ಒಂದು ಪುಟ್ಟ ಪ್ರಯತ್ನ

ಕೃಷಿಕರೇ, ತಾವು ನಿರ್ಮಿಸಿದ ಉಪಕರಣಗಳ ಮಾಹಿತಿಯನ್ನು ಕೃಷಿ ಪ್ರತಿಷ್ಠಾನಕ್ಕೆ ತಿಳಿಸಲು ಕೋರಿದೆ.

**ಸ್ವರ್ಣವಲ್ಲೀ ಕೃಷಿ ಪ್ರತಿಷ್ಠಾನ (ರಿ.)**
ಮಾಹಿತಿ ಮತ್ತು ತಂತ್ರಜ್ಞಾನ ಕೇಂದ್ರ
**ಶ್ರೀನಿಕೇತನ, ನಾಡಿಗಗಲ್ಲಿ, ಶಿರಸಿ**
ಸಮಯ : ಮಧ್ಯಾಹ್ನ **3–00** ರಿಂದ **6–00** ಘಂಟೆಯವರೆಗೆ
ದೂರವಾಣಿ : **08384–223318**

"ಸೂರ್ಯ" ಹೆಸರಿನ ಸೋಲಾರ್ ಡ್ರೈಯರ್ ವಿನ್ಯಾಸಕರು:

**ರಾಘವೇಂದ್ರ(ಪ್ರದೀಪ) ಮಂ. ಹೆಗಡೆ** ಬಿ.ಇ.
ಕೆಂಗ್ರೆ–ಬಾಳೆಗದ್ದೆ, ಶಿರಸಿ (ಉ.ಕ.)
ಫೋನ್:08384–247829 ಮೊ. 94824 13585

ದೇಣಿಗೆ ಮೌಲ್ಯ : ರೂ. **5–00**

ಅಕಾಲಿಕ ಮಳೆ, ಮೋಡ–ಬಿಸಿಲಿನ ವಾತಾವರಣದ ಇಂದಿನ ಅನಿಶ್ಚಿತತೆಯ ಸ್ಥಿತಿಯಲ್ಲಿ ಅಡಿಕೆ ಬೆಳೆಗಾರರು ತೀರಾ ತೊಂದರೆ ಅನುಭವಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈಗಾಗಲೇ ಅಡಿಕೆ ಗೊನೆ ಕೊಯ್ದವರು, ಕೊಯ್ಯಬೇಕಾದವರು ಅಡಿಕೆ ಒಣಗಿಸುವ ಕುರಿತಾಗಿ (ಸುಲಿದ ಹಸಿಅಡಿಕೆ ಅಥವಾ ಗೋಟು) ಹೊಂದಿದ ಚಿಂತೆಯನ್ನು ದೂರಮಾಡಲು ಕಡಿಮೆ ವೆಚ್ಚದಲ್ಲಿ ನಿರ್ಮಿಸಿ, ಸುಲಭವಾಗಿ ನಿರ್ವಹಣೆ ಮಾಡಬಹುದಾದ 'ಸೋಲಾರ್ ಡ್ರೈಯರ್'ನ್ನು ನಿಮಗೆ ಪರಿಚಯಿಸುತ್ತಿದ್ದೇವೆ.

ಮೊದಲನೆಯದಾಗಿ ರೈತಬಾಂಧವರ ಗಮನಕ್ಕೆ ತರಬಯಸುವುದೇನೆಂದರೆ, ಗ್ರೀನ್ ಹೌಸ್(ಪಾಲಿಹೌಸ್)ನ ಮಾದರಿಯನ್ನೇ ಅಟ್ಲು(ಅಟ್ಟ)ದ ಮೇಲೆ ನಿರ್ಮಿಸಿ ಅದರಲ್ಲಿ ಬೆಳೆಗಳನ್ನು ಒಣಗಿಸಬಹುದೆಂಬ ಕಲ್ಪನೆ ತಪ್ಪು. 'ಗ್ರೀನ್‌ಹೌಸ್' ಸಸ್ಯಗಳು ಉತ್ತಮವಾಗಿ ಚಿಗುರಲು ಅಥವಾ ಬೆಳೆಯಲು ಅಗತ್ಯದ ತೇವಾಂಶ (ಆರ್ದ್ರತೆ) ಉಳಿಸಿಕೊಂಡು ಸೂಕ್ತ ವಾತಾವರಣ ಕಲ್ಪಿಸಿಕೊಡುತ್ತದೆಯೇ ಹೊರತು ಬೆಳೆಗಳನ್ನು ಒಣಗಿಸಲು ಅಂದರೆ ಅವುಗಳಲ್ಲಿನ ತೇವಾಂಶ ಆರಿ ಹೊರಹೋಗಲು ಅನುವು ಮಾಡುವುದಿಲ್ಲ. ಹಾಗಾಗಿ ಅಗತ್ಯದ ಮಾರ್ಪಾಡುಗಳಿಂದ ಸಿದ್ಧಪಡಿಸದಿರುವ ಪಾಲಿಹೌಸ್‌ನಲ್ಲಿ ಬೆಳೆ ಒಣಗದೇ ಕೊಳೆಯುವ, ಬೂಸ್ಟ್‌ನಿಂದ ಹಾಳಾಗುವ ಸನ್ನಿವೇಶ ಎದುರಿಸಬೇಕಾಗುತ್ತದೆ.

ಗ್ರೀನ್‌ಹೌಸ್ (ಪಾಲಿಹೌಸ್) ಹಾಗೂ ಡ್ರೈಯರ್‌ನ ನಡುವಿನ ತಾಂತ್ರಿಕತೆಯಲ್ಲಿ ತದ್ವಿರುದ್ಧವಾದ ಭಿನ್ನತೆಯಿದೆ. ಈ ಮೂಲಭೂತ ಅಂಶವನ್ನು ಗಮನದಲ್ಲಿಟ್ಟುಕೊಂಡು, ಎಲ್ಲ ಕೃಷಿಕರಿಗೂ ಕೈಗೆಟಕುವ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿ ಮತ್ತು ಉಪಯೋಗ ಪೂರ್ಣವಾದ ಡ್ರೈಯರನ್ನು ಅಭಿವೃದ್ಧಿಪಡಿಸಲಾಗಿದೆ. ಸಾಮಾನ್ಯ ಕೌಶಲ್ಯದಿಂದ ಎಲ್ಲ ರೈತರೂ ತಮಗೆ ಅಗತ್ಯವಾದ ಡ್ರೈಯರನ್ನು ತಾವೇ ಸಿದ್ಧಪಡಿಸಿಕೊಳ್ಳಬಹುದಾಗಿದೆ.

**ಡ್ರೈಯರ್ ಸಿದ್ಧಪಡಿಸುವ ವಿಧಾನ :**

ಒಂದು ಕಣಜ (ಸುಮಾರು 5.5 ಫೂಟು ಅಗಲ, 15.5 ಫೂಟು ಉದ್ದ) ಅಳತೆಗೆ ಸರಿ ಹೊಂದುವ ಡ್ರೈಯರ್.

1) ಪಿವಿಸಿ ಪೈಪುಗಳನ್ನು ಕೋಷ್ಟಕದಲ್ಲಿ ಇರುವಂತೆ ಅಳತೆಗೆ ಸರಿಯಾಗಿ ಕತ್ತರಿಸಿಕೊಳ್ಳಿ (3 ಫೂಟು)
2) ಐದು ¾ ಇಂಚು ಟೀ ಗಳನ್ನು ಚಿತ್ರದಲ್ಲಿ ತೋರಿಸಿದಂತೆ 3ಫೂಟು ಉದ್ದದ ¾ ಇಂಚು ಪೈಪುಗಳಿಗೆ ಪಿವಿಸಿ ಗಮ್ಮಿನಿಂದ ಒಂದೇ ನೇರಕ್ಕೆ ಜೋಡಿಸಿಕೊಳ್ಳಿ.



3) ಇದೇ ರೀತಿ ಇನ್ನೂ ಐದು ¾ ಇಂಚು ಟೀ ಗಳನ್ನು ಜೋಡಿಸಿಕೊಳ್ಳಿ.
4) ಟೀ ಗಳಿಗೆ ¾ ಇಂಚು ಪೈಪಿನ ತುಂಡುಗಳನ್ನು ಏರಿಕೆ ಕ್ರಮದಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಜೋಡಿಸಿ. (0ಇಂಚು, 6ಇಂಚು, 9ಇಂಚು, 12ಇಂಚು, 15ಇಂಚು)
5) ಇವುಗಳಿಗೆ ¾ಇಂಚು > ½ಇಂಚು ರೆಡ್ಯೂಸರನ್ನು ಸೇರಿಸಿ.
6) ¾ಇಂಚು ಪೈಪನ್ನು 5½ ಫೂಟ್ ಗೆ ಎರಡು ತುಂಡಾಗಿ ಕತ್ತರಿಸಿ, ಇವುಗಳ ಎರಡೂ ತುದಿಗೆ ¾ಇಂಚು ಎಲ್‌ಬೋಗಳನ್ನು ಪಿವಿಸಿ ಗಮ್ಮಿನಿಂದ ಒಂದೇ ನೇರಕ್ಕೆ ಜೋಡಿಸಿ.
7) ಇವುಗಳನ್ನು ಟೀ ಸೇರಿಸಿದ ಪೈಪುಗಳಿಗೆ ಜೋಡಿಸಿ. ಆಗ 5½ ಫೂಟು x 15½ ಫೂಟು ಚೌಕಟ್ಟು ಸಿದ್ಧಗೊಳ್ಳುತ್ತದೆ.
8) ಈಗ ½ ಇಂಚು ಪೈಪುಗಳನ್ನು 6 ಫೂಟಿಗೆ ಐದು ತುಂಡುಗಳಾಗಿ ಕತ್ತರಿಸಿ, ರೆಡ್ಯೂಸರ್‌ಗಳಿಗೆ ಚಿತ್ರದಲ್ಲಿ ತೋರಿಸಿದಂತೆ ಜೋಡಿಸಿ.
9) ಆಕಾರ ಸರಿ ಬರಲು ರೆಡ್ಯೂಸರ್‌ಗಳಿಗೆ ದಾರವನ್ನು ಬಿಗಿದು ಎದುರಿನ ರೆಡ್ಯೂಸರ್‌ಗಳಿಗೆ ಎಳೆದು ಕಟ್ಟಿ. ಎಲ್‌ಬೋ ಮತ್ತು ಟೀ ಕೂಡಿಸಿದ ಪೈಪು ಸೇರುವಲ್ಲಿ ನಾಲ್ಕೂ ಕಡೆಗೆ ಗಮ್ ಟೇಪಿನಿಂದ ಜಾರದಂತೆ ಬಂಧಿಸಿ.
10) ½ ಇಂಚು ಪೈಪು ಅಥವಾ ಶಮೆಗಳದ ದಬ್ಬೆಯನ್ನು ½ ಇಂಚು ಪೈಪಿನ ಕಮಾನುಗಳ ಮೇಲೆ ಚಿತ್ರದಲ್ಲಿ ತೋರಿಸಿದಂತೆ ಬಿಗಿಯಾಗಿ ದಾರದಿಂದ ಕಟ್ಟಿ.
11) ಸಾದಾ ಪಾರದರ್ಶಕ ಪ್ಲಾಸ್ಟಿಕ್ ಶೀಟನ್ನು ಸರಿಯಾಗಿ ಹೊದಿಸಿ.

**ಸಾದಾ ಪ್ಲಾಸ್ಟಿಕ್ ಶೀಟಿನ ಶಿಫಾರಸ್ಸಿಗೆ ಕಾರಣ :**

1) ಬೆಲೆ ಬಹಳ ಕಡಿಮೆ.
2) ಶಾಖದ ಉತ್ಪಾದನೆಯಲ್ಲಿ ಹೋಲಿಸಿದರೆ ಯು.ವಿ. ಪ್ಲಾಸ್ಟಿಕ್ ಶೀಟಿಗೆ ವ್ಯತ್ಯಾಸವಿಲ್ಲ.

**ಉಪಯೋಗಿಸುವ ವಿಧಾನ :**

ಸೋಲಾರ್ ಡ್ರೈಯರನ್ನು ಸಾಮಾನ್ಯ ಕಣಜದ ಅಳತೆಗೆ ಡಿಸೈನ್ ಮಾಡಿರುವುದರಿಂದ ಕಣಜದ ಅಳತೆಯ ಅಟ್ಲನ್ನು ದಕ್ಷಿಣೋತ್ತರವಾಗಿ ಮಾಡಿಕೊಂಡು ಅದರ ಮೇಲೆ ಕಣಜವನ್ನು ಬಿಡಿಸಿಕೊಳ್ಳಿ. (ಶೇಡ್ ನೆಟ್ ಕೂಡಾ ಆದೀತು) ಇದರ ಮೇಲೆ ಅಡಿಕೆಯನ್ನು ಹರಗಿಕೊಳ್ಳಿ, ಅವಶ್ಯ ಬಿದ್ದರೆ ಸ್ವಲ್ಪ ದಪ್ಪಗಾದರೂ ನಡೆಯುತ್ತದೆ. ಕಣಜದ ಮೇಲೆ ಡ್ರೈಯರಿನ ಎತ್ತರದ ಮುಖವನ್ನು ಉತ್ತರದ ಕಡೆಗೆ ಮಾಡಿ ಮುಚ್ಚಿರಿ.

**ಗಮನಿಸಿ :**

ಸೋಲಾರ್ ಡ್ರೈಯರ್ ಒಂದು ನೈಸರ್ಗಿಕವಾಗಿ ಸಿಗುವ ಸೂರ್ಯನ ಬಿಸಿಲನ್ನು ಉತ್ತಮವಾಗಿ ಬಳಕೆ ಮಾಡುವ ಸಾಧನವಾಗಿರುವುದರಿಂದ ಇದು ಬಹಳ ಸೂಕ್ಷ್ಮ ಸಂವೇದನೆಯದಾಗಿದೆ. ಇದಕ್ಕೆ ದಕ್ಷಿಣೋತ್ತರ ದಿಕ್ಕು ಉತ್ತಮವಾಗಿರುತ್ತದೆ. ಒಂದು ವೇಳೆ ಬಿಸಿಲು ಇಲ್ಲದೇ ಮೋಡ ಕವಿದ ವಾತಾವರಣವಿದ್ದರೆ ಅಥವಾ ಸಣ್ಣ ಮಳೆ ಬರುತ್ತಿದ್ದರೆ ಡ್ರೈಯರಿನ ಒಳಗಡೆ ತಾಪಮಾನವು ಸುಮಾರು 25 ರಿಂದ 32 ಡಿಗ್ರಿ ಸೆಂಟಿಗ್ರೇಡ್ ವರೆಗೆ ಇರುತ್ತದೆ. ಈ ತಾಪಮಾನವು ಕೊಳೆಯಲು, ಬೂಸ್ಟ್ ಬೆಳೆಯಲು ಉತ್ತಮವಾಗಿರುತ್ತದೆ. ಇದನ್ನು ತಪ್ಪಿಸಲು ಡ್ರೈಯರನ್ನು ಎತ್ತಿ ಗಾಳಿಯಾಡಲು ಅಥವಾ ಡ್ರೈಯರಿನಲ್ಲಿ ಕರೆಂಟಿನ ರೂಮ್ ಹೀಟರನ್ನು ಅಳವಡಿಸಿ ತಾಪಮಾನವನ್ನು ಏರಿಸಬೇಕು. ಅಡಿಕೆಯನ್ನು ಒಣಗಿಸಲು ಹೆಚ್ಚಿನ ಕಣಜಗಳು ಬೇಕಿದ್ದರೆ ಕಣಜಗಳಿಗೊಂದರಂತೆ ಡ್ರೈಯರನ್ನು ಮಾಡಿಕೊಳ್ಳುವುದು ಉತ್ತಮ.

**ಎಚ್ಚರಿಕೆ :**

ಡ್ರೈಯರಿನಲ್ಲಿ ತಾಪಮಾನ, ಆರ್ದ್ರತೆ ಮತ್ತು ಅಡಿಕೆ ವಾಸನೆ ಹೆಚ್ಚಿರುವುದರಿಂದ ಅದರ ಒಳಗಿದ್ದು ಕೆಲಸ ಮಾಡಲು ಕಷ್ಟಸಾಧ್ಯವಾಗುತ್ತದೆ. ಅಸ್ತಮಾ, ಅಲರ್ಜಿಯಂತಹ ರೋಗಗಳು ಉಲ್ಬಣಗೊಳ್ಳುವ ಸಾಧ್ಯತೆ ಇರುತ್ತದೆ. ಡ್ರೈಯರ್ ದೊಡ್ಡದಾದಂತೆ ಕಟ್ಟಲು ನುರಿತ ಕೆಲಸಗಾರರ ಅವಶ್ಯಕತೆ ಇರುವುದರಿಂದ ವೆಚ್ಚ ಹೆಚ್ಚಾಗುತ್ತದೆ. ಡ್ರೈಯರಿನ ಒಳಗಡೆ ಮುಚ್ಚಿದ ವಾತಾವರಣ ಇರುವುದರಿಂದ ಒಣಗುತ್ತ ಬಂದ ಅಡಿಕೆಯ ಸಂಗಡ ಹಸಿ ಅಡಿಕೆಯನ್ನು ಹಾಕಿದರೆ, ಹಸಿಅಡಿಕೆಯ ತೇವವನ್ನು ಒಣಅಡಿಕೆ ಸಮತೋಲನ ಬರುವವರೆಗೂ ಹೀರಿಕೊಳ್ಳುತ್ತದೆ. ಇದು ವೈಜ್ಞಾನಿಕವಾಗಿ ಸಿದ್ಧವಾಗಿರುವ ವಿಷಯ. ಇದರಿಂದ ಅಡಿಕೆ ಒಣಗಲು ಹಿನ್ನಡೆಯಾಗುವುದು ಸಹಜ.

ನಾವು ಡಿಸೈನ್ ಮಾಡಿದ ಡ್ರೈಯರನ್ನು ಕಳಚಿ ಒಂದು ಕಡೆ ಶೇಖರಿಸಿ ಇಡಬಹುದು. ಇದು ವಿಶೇಷವಾಗಿದೆ. ಈ ಡ್ರೈಯರನ್ನು ಮಾಡಲು ಒಂದು ಸ್ಕ್ವೇರ್ ಫೂಟಿಗೆ ಅಜಮಾಸ ರೂ.10–00 ವೆಚ್ಚ ತಗಲುತ್ತದೆ. ಅದೇ ವೇಳೆ ಶಾಶ್ವತ ಪಾಲಿ ಹೌಸ್‌ನಂಥ ಡ್ರೈಯರ್ ಮಾಡಲು, ಅದರ ಭಾರ ತಾಳಲು ಅಗತ್ಯವಾದಷ್ಟು ಗಟ್ಟಿಮುಟ್ಟಾದ ಅಟ್ಟ (ಅಟ್ಲು) ತಯಾರಿಯೂ ಸೇರಿದಂತೆ ಅಧಿಕ ವೆಚ್ಚ ತಗಲುತ್ತದೆ ಎಂಬುದು ಗಮನಾರ್ಹ.



## ಅಗತ್ಯ ಪರಿಕರಗಳ ಕೋಷ್ಟಕ

| ಪೈಪ್ ವ್ಯಾಸ | ಅಳತೆ (ಉದ್ದ) | ಸಂಖ್ಯೆ |
|---|---|---|
| ¾ ಇಂಚು | 3 ಫೂಟು | 10 |
| ¾ ಇಂಚು | 5.5 ಫೂಟು | 2 |
| ½ ಇಂಚು | 6 ಫೂಟು | 5 |

**ಜೋಡಣೆಗಳು :**

¾ ಇಂಚು ಟೀ – 10

¾ ಇಂಚು - ½ ಇಂಚು ರೆಡ್ಯೂಸರ್ – 10

ಪ್ಲಾಸ್ಟಿಕ್ ದಾರ, ಟೀಗಳಿಗೆ ಏರಿಕೆ ಕ್ರಮದಲ್ಲಿ ಜೋಡಿಸಲು ¾ ಇಂಚು ನ ಅಗತ್ಯ ಅಳತೆಯ ತುಂಡು ಪೈಪುಗಳು.

**ವಿ. ಸೂ. :**

¾ ಇಂಚಿನ ಥ್ರೆಡೆಬಲ್ ಪಿವಿಸಿ ಪೈಪುಗಳನ್ನು , ½ ಇಂಚಿನ ಸಾದಾ ನೀಲಿ ಪೈಪುಗಳನ್ನು ಬಳಸುವುದು ಸೂಕ್ತ. ಸ್ಕೆಲಿಟನ್ (ಗೂಡು) ಗೆ ಸಾಕಾಗುವಷ್ಟು ಅಳತೆಯ ಸಾದಾ ಪ್ಲಾಸ್ಟಿಕ್‌ನ್ನು ಖರೀದಿಸಿ, ಹೊಲಿಗೆ ಮಾಡಬೇಕಾಗುತ್ತದೆ. ಈ ಹೊದಿಕೆಯನ್ನು ಯಾವುದೇ ರೀತಿಯಲ್ಲಿ ಪೈಪ್‌ನ ಸ್ಕೆಲಿಟನ್ನಿಗೆ ಬಿಗಿಯಾಗುವಂತೆ ಹೊದಿಸಬೇಕು. ಆವಿ ಹೊರ ಹೋಗಲು ಗೂಡಿನ ಎತ್ತರ ಭಾಗದ ಮುಖದ ಮೇಲ್ಭಾಗದಲ್ಲಿ ಕನಿಷ್ಠ 6 ಇಂಚು ವ್ಯಾಸದ ರಂಧ್ರ ಮಾಡಬೇಕು. ಅವಶ್ಯಕತೆಗನುಗುಣವಾಗಿ ರಂಧ್ರದ ಅಳತೆಯಲ್ಲಿ ವ್ಯತ್ಯಾಸ ಮಾಡಬಹುದು.

**ಸೋಲಾರ್ ಡ್ರೈಯರಿಗೆ ತಗಲುವ ವೆಚ್ಚ :**

ಒಂದು ಕಣಜದ ಅಳತೆ ಡ್ರೈಯರಿಗೆ (15.5 x 5.5 ಫೂಟಿಗೆ) ಸಾಮಗ್ರಿಗಳ ವೆಚ್ಚ ಸೇರಿ ತಾವೇ ತಯಾರಿಸಿಕೊಂಡರೆ ರೂಪಾಯಿ ಎಂಟುನೂರರಿಂದ ಒಂದು ಸಾವಿರ ಬರುತ್ತದೆ.

# ಸರಳ, ಅಲ್ಪ ವೆಚ್ಚದ ಸೋಲಾರ್ ಡ್ರೈಯರ್




ಪಕ್ಕದ ನೋಟ

ಎದುರಿನ ನೋಟ

**ರಾಘವೇಂದ್ರ(ಪ್ರದೀಪ) ಮಂ. ಹೆಗಡೆ** ಬಿ.ಇ.
ಬಾಳೆಗದ್ದೆ (ಕೆಂಗ್ರೆ), ಶಿರಸಿ (ಉ.ಕ.)
ಫೋನ್:08384–247829 ಮೊ. 94824 13585



## ಸೋಲಾರ್ ಡ್ರೈಯರ್ ಪ್ರಾತ್ಯಕ್ಷಿಕೆ

ದಿನಾಂಕ: **23–11–2010** ಸ್ಥಳ: ಟಿ. ಎಸ್. ಎಸ್. ಶಿರಸಿ

**ಸೋಲಾರ್ ಡ್ರೈಯರ್ ಮಾದರಿ ನೋಡಲು ಸಿಗುವ ಸ್ಥಳ**

**ಟಿ. ಎಸ್. ಎಸ್. ಶಿರಸಿ**

**ಟಿ. ಎಸ್. ಎಸ್. ಸಿದ್ದಾಪುರ**

**ಟಿ. ಎಸ್. ಎಸ್. ಯಲ್ಲಾಪುರ**




